# 2002
# KANNADA
## Paper – I
## ( Literature )

*Time : 3 Hours ]* *[ Maximum Marks : 300*

---

*INSTRUCTIONS*

Candidates should attempt *five* questions in all, choosing at least *two* from each Section.

*All* questions carry equal marks.

Answers must be written in Kannada.

---

### ವಿಭಾಗ – A

1. ಭಾಷೆಯೆಂದರೇನು ? ಭಾಷೆಯ ಉಗಮವನ್ನು ಕುರಿತು ವಿವಿಧ ಭಾಷಾ ವಿಜ್ಞಾನಿಗಳು ಪ್ರಕಟಿಸಿದ ಅಭಿಪ್ರಾಯಗಳನ್ನು ವಿವೇಚಿಸಿ.

2. ಕನ್ನಡ ಹಾಗೂ ಇತರ ದ್ರಾವಿಡ ಭಾಷೆಗಳೊಳಗಿನ ಸಂಬಂಧಾಂತರಗಳನ್ನು ಕುರಿತು ಪರಿಶೀಲಿಸಿ.

3. ಈ ಕೆಳಗಿನವುಗಳಲ್ಲಿ ಯಾವುದಾದರೂ ಐದಕ್ಕೆ ಟಿಪ್ಪಣಿ ಬರೆಯಿರಿ:

   a) ಭಾಷಾ ವರ್ಗೀಕರಣ

   b) ಕನ್ನಡದ ಸಾಮಾಜಿಕ ಉಪಭಾಷೆಗಳು

   c) ಕನ್ನಡದಲ್ಲಿ ಕಾಲವಾಚಕ ಪ್ರತ್ಯಯಗಳು

   d) ಕನ್ನಡದಲ್ಲಿ ಲಿಂಗ ಮತ್ತು ವಚನಗಳು

   e) ಕನ್ನಡದಲ್ಲಿ ವಿಭಕ್ತಿ ಪ್ರತ್ಯಯಗಳು

   f) ಬಸವಣ್ಣನ ವಚನಗಳು

[ Turn over

g) ಪಂಪ ಭಾರತ

h) ಲಕ್ಷ್ಮೀಶನ ಜೈಮಿನಿ ಭಾರತ

i) ಸಂಚಿಯ ಹೊನ್ನಮ್ಮ

j) ಮುದ್ರಣ

4. ವಚನ ಸಾಹಿತ್ಯದ ಸಾಮಾಜಿಕ-ಸಾಂಸ್ಕೃತಿಕ ಹಿನ್ನೆಲೆಗಳನ್ನು ವಿವರಿಸಿ.

5. ಹೊಸಗನ್ನಡ ಸಾಹಿತ್ಯದ ಮೇಲಾದ ಆಂಗ್ಲ ಸಾಹಿತ್ಯದ ಪ್ರಭಾವವನ್ನು ಕುರಿತು ವಿವೇಚಿಸಿ.

## ವಿಭಾಗ – B

6. ಭರತನ ರಸಸೂತ್ರ ಯಾವುದು ? ಅದಕ್ಕೆ ವಿವಿಧ ವಿದ್ವಾಂಸರು ನೀಡಿದ ವ್ಯಾಖ್ಯಾನಗಳನ್ನು ಕುರಿತು ವಿವೇಚಿಸಿ.

7. ''ರಸಧ್ವನಿ ಔಚಿತ್ಯ – ಇವು ಕಾವ್ಯ ಗಾಯತ್ರಿ'' ಎಂಬ ಹೇಳಿಕೆಯನ್ನು ವಿಮರ್ಶಿಸಿ.

8. ಕರ್ನಾಟಕ ಸಂಸ್ಕೃತಿಗೆ ಹೊಯ್ಸಳರ ಕೊಡುಗೆಯೇನು ? ವಿವರಿಸಿ.

9. ಕರ್ನಾಟಕದ ಪ್ರಮುಖ ಧರ್ಮಗಳು ಯಾವುವು ? ಕರ್ನಾಟಕ ಸಂಸ್ಕೃತಿಗೆ ಅವುಗಳ ಕೊಡುಗೆಯೇನು ? ಸಮೀಕ್ಷಿಸಿ.

10. ಈ ಕೆಳಗಿನವುಗಳಲ್ಲಿ ಯಾವುದಾದರೂ ಐದಕ್ಕೆ ಟಿಪ್ಪಣಿ ಬರೆಯಿರಿ:

    a) ರೀತಿ ಪ್ರಸ್ಥಾನ

    b) ಸಹೃದಯ

    c) ಮಾನಸಿಕ ದೂರ

    d) ಪ್ರತಿಭೆ

    e) ದಲಿತ ಬಂಡಾಯ ಸಾಹಿತ್ಯ

    f) ಕನ್ನಡದಲ್ಲಿ ಕಾದಂಬರಿ ಸಾಹಿತ್ಯ

    g) ರಾಷ್ಟ್ರಕೂಟರು

    h) ಕೃಷ್ಣದೇವರಾಯ

    i) ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ

    j) ಬಾದಾಮಿ ಚಾಲುಕ್ಯರು

**28/II**

# 2002

# KANNADA

## Paper – II

## ( Literature )

Time : 3 Hours ] [ Maximum Marks : 300

*INSTRUCTIONS*

Candidates should attempt questions from **Sections A, B and C** as indicated under each Section.

The number of marks carried by each question is indicated at the end of the question.

Answers must be written in Kannada.

---

## ವಿಭಾಗ – A

1 ಈ ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪದ್ಯಗಳ ಸಂದರ್ಭ, ಭಾವ ಮತ್ತು ಸ್ವಾರಸ್ಯವನ್ನು ಕುರಿತು ಬರೆಯಿರಿ: 4 × 20 = 80

a) ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮೀ ಭಟ ಖಡ್ಗ ಮಂಡಲೋ
ತ್ಪಲ ವನ ವಿಭ್ರಮ ಭ್ರಮರಿಯಪ್ಪ ಮನೋಹರಿ ರಾಜ್ಯ ಲಕ್ಷ್ಮಿ ಭೂ
ವಲಯಮ ನಯ್ಯನಿತ್ತುದು ಮನಾಂ ನಿನಗಿತ್ತನಿದೇವುದಣ್ಣ ನೀನ್
ಒಲಿದ ಲತಾಂಗಿಗಂ ಧರೆಗಮಾಟಿಸಿದಂದು ನೆಗಟ್ತೆ ಮಾಸದೇ.

b) ಕಲಿತನದುರ್ಕು ಜವ್ವನದ ಸೊರ್ಕು ನಿಜೇಶನ ನಚ್ಚು ಮಿಕ್ಕ ತೋ
ಳ್ವಲದ ಪೊಡರ್ಪು ಕರ್ಣ ನಿನಗುಳ್ಳನಿತೇ ನೆನಗುಂಟೆ ಭಾರತಂ
ಕಲಹ ಮಿದಿರ್ಚುವಂ ಹರಿಗನಪ್ಪೊಡೆ ಮೊಕ್ಕಳ ಮೇಕೆ ನೀ ಪಳಂ
ಚಲದಪೆಯಣ್ಣ ಸೂಟ್ಪಡೆಯಲಪ್ಪುದು ಕಾಣ ಮಹಾಜಿರಂಗದೊಳ್.

c) ಬಡತನದ ಹೊತ್ತಾನೆ ದೊರಕಿ ಫಲವೇನು ನೀ
ರಡಸಿರ್ದ ಹೊತ್ತಾಜ್ಯ ದೊರಕಿ ಫಲವೇನು ರುಜೆ
ಯಡಸಿ ಕೆಡೆದಿಹ ಹೊತ್ತು ರಂಭ ದೊರೆಕೊಂಡಲ್ಲಿ ಫಲವೇನು ಸಾವ ಹೊತ್ತು
ಪೊಡವಿಯೊಡೆತನ ದೊರಕಿ ಫಲವೇನು ಕಡುವಿಸಿಲು
ಹೊಡೆದು ಬೆಂಡಾಗಿ ಬೀಳ್ವಮಗ ನೀನೊಲಿದು ಮಣಿ
ದೊಡಿಗೆಗಳ ನಿತ್ತು ಫಲವೇನು ಭೂಪಾಲ ಹೇಳೆನುತ ಮತ್ತಿಂತೆಂದರು.

d) ಲೆಕ್ಕದೊಳು ಪಡಿಯಿಲ್ಲ ಮತಿಯುಳ್ಳ ಕೋವಿದಂ
ಎನ್ನ ಭಂಡಾರಕ್ಕೆ ಬರೆಯಿಸುವೆ ನೀತನಂ
ಉನ್ನತ ಜ್ಞಾನಯುತ ಗುಣಕ ವಿಖ್ಯಾತನಂ
ಎಂದು ಉಡಕೊಡಿಸಿ ಜೀವಿತವನಾಗಳೆ ಮಾಡಿ
ಒಂದು ವರುಷಕ್ಕೆ ನೂಱೊಂದು ಹೊನ್ನಂ ಬೇಡಿ
ಕೊಡಿಸಿ ಭಂಡಾರಿ ತನ್ನರಮನೆಗೆ ಕೊಂಡೊಯ್ಯು
ಕಡುಮೋಹದಿಂ ಹೊಗಳುತ್ತೆ ಮನ್ನಣೆ ಗೆಯ್ಯು
ಕುಲವೊಂದೆ ಕುಲವಾಗೆ ಗೋತ್ರವಂತನುವಾಗೆ
ನೆಲೆ ವಿಚಾರಿಸಿ ತನ್ನ ಸಂಬಂಧ ವೊಂದಾಗೆ
ಸಿದ್ಧ ದಂಡಾಧಿಪಂ ಹೆಚ್ಚುತಂ ಓಗ್ಗುತಂ.

e) ಕಾವನಾತನೆ ಕೊಲುವನಾತನೆ
ಸಾವೆನಾತನ ಕೈಯ ಬಾಯಲಿ
ನೀವು ಪಾಂಡವರೊಡನೆ ಸುಖದಲಿ ರಾಜ್ಯ ಮಾಡುವುದು
ಸಾವವರು ನಾವಂಜಿ ಬದುಕೆವು
ನೀವು ಚಿಂತಿಸಬೇಡಿ ನಿಮ್ಮನು
ಕಾವನೈ ಕರುಣದಲಿ ಗದುಗಿನ ವೀರನಾರಾಯಣ.

f) ನುಡಿದರೆ ಮುತ್ತಿನಹಾರದಂತಿರಬೇಕು !
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು !
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು !
ನುಡಿದರೆ ಲಿಂಗ ಮೆಚ್ಚಿ ಅಹುದೆನಬೇಕು !
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲಸಂಗಮದೇವ ನೆಂತೊಲಿವನಯ್ಯ ?

g) ಆಗಾಗ ದೇಹ ಬೇರಾತ್ಮ ಬೇರೆಂದು ವಿ
ಭಾಗಿಸಿ ತನ್ನ ತಾ ನೆಮ್ಮಿ
ಭೋಗಿಸಿದರೆ ಕರ್ಮಬಂಧ ವಿಲ್ಲಾಗಿಯಾ
ಭೋಗಿ ತಾನೇ ಯೋಗಿಯಲ್ತೆ
ಭೂಮಿಯೊಳಗೆ ಹೂಳ್ದ ಲೋಹ ಮಣ್ಪಡುವುದು
ಹೇಮ ಮಣ್ಪಡಿವುದೇ ನೃಪತಿ
ಕಾಮಿಸಿ ಭೋಗಿಸುವಗೆ ಕರ್ಮಬಂಧ, ನಿ
ಷ್ಕೇಮ ಭೋಗಿಗೆ ಬಂಧವುಂಟೆ ?

h) ಧನಕನಕ ಉಳ್ಳನಕ ದಿನಕರನಂತಿಕ್ಕು
ಧನಕನಕ ಹೋದ ಬೆಳಗಾಗಿ - ಹಾಳೂರ
ಶುನಕನಂತಕ್ಕು ಪರಮಾರ್ಥ
ಸಿರಿಯಣ್ಣ ಸುಳ್ಳನಕ ಹಿರಿಯಣ್ಣನಾಗಿಕ್ಕು
ಸಿರಿಯಣ್ಣ ಹೋದ ಬೆಳಗಾಗಿ - ಹಾಳೂರ
ನರಿಯಣ್ಣ ನಕ್ಕು ಪರಮಾರ್ಥ.

## ವಿಭಾಗ – B

ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಮಾತ್ರ ಉತ್ತರ ಬರೆಯಿರಿ. 2 × 55 = 110

10

2. ಆದಿ ಪುರಾಣದಲ್ಲಿ ನಿರೂಪಿತವಾದ ಭರತ-ಬಾಹುಬಲಿ ಪ್ರಸಂಗದ ಸ್ವಾರಸ್ಯವನ್ನು ವಿಶದಪಡಿಸಿ.

ಅಥವಾ

ಕೌರವನು ಭೀಷ್ಮರಿಗೆ ಸೇನಾಧಿಪತಿ ಪಟ್ಟ ಕಟ್ಟಿದ ಸಂದರ್ಭವನ್ನು ಪಂಪನು ಹೇಗೆ ಚಿತ್ರಿಸಿದ್ದಾನೆ ? ವಿವೇಚಿಸಿ.

3. ವಸಿಷ್ಠ ವಿಶ್ವಾಮಿತ್ರರ ವಿವಾದದ ಚಿತ್ರಣ ಹರಿಶ್ಚಂದ್ರ ಕಾವ್ಯದಲ್ಲಿ ಹೇಗೆ ಮೂಡಿಬಂದಿದೆ ? ವಿವರಿಸಿ.

ಅಥವಾ

ಕೃಷ್ಣ ಸಂಧಾನದ ಸನ್ನಿವೇಶವನ್ನು ಕುಮಾರವ್ಯಾಸನು ಹೇಗೆ ಚಿತ್ರಿಸಿದ್ದಾನೆ ? ವಿಶದಪಡಿಸಿ.

4. ಬಸವರಾಜದೇವರ ರಗಳೆಯಲ್ಲಿ ಬಸವಣ್ಣನ ವ್ಯಕ್ತಿತ್ವವು ಹೇಗೆ ನಿರೂಪಿತವಾಗಿದೆ ? ಸಮೀಕ್ಷಿಸಿ.

ಅಥವಾ

ಭರತೇಶ ವೈಭವದಲ್ಲಿ ಕವಿಯು ಯೋಗ-ಭೋಗಗಳ ಸಮನ್ವಯವನ್ನು ಹೇಗೆ ನಿರೂಪಿಸಿದ್ದಾನೆ ? ವಿವೇಚಿಸಿ.

5. ಬಸವಣ್ಣನವರ ವಚನಗಳಲ್ಲಿ ಸಮಾಜ ವಿಮರ್ಶೆಯು ಹೇಗೆ ಪ್ರತಿಪಾದಿತವಾಗಿದೆ ? ವಿವರಿಸಿ.

ಅಥವಾ

ಸರ್ವಜ್ಞನ ವಚನಗಳಲ್ಲಿ ಪ್ರತಿಪಾದಿತವಾದ ನೀತಿಯ ವಿಚಾರಗಳೇನು ? ಉದಾಹರಣೆಸಹಿತ ವಿಮರ್ಶಿಸಿ.

## ವಿಭಾಗ – C

ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಮಾತ್ರ ಉತ್ತರ ಬರೆಯಿರಿ. $2 \times 55 = 110$

6. ನವೋದಯ ಕಾವ್ಯದ ಸ್ವರೂಪ ಮತ್ತು ಲಕ್ಷಣಗಳನ್ನು ತಿಳಿಸಿ. ಅದರ ಉಗಮ ಹಾಗೂ ವಿಕಾಸವನ್ನು ಕುರಿತು ವಿವೇಚಿಸಿ.

ಅಥವಾ

''ಕನ್ನಡ ಸಣ್ಣಕಥೆ ಜೀವಂತವೂ ಪ್ರಗತಿಪರವೂ ಆದ ಸಾಹಿತ್ಯ ರೂಪ'' ಎಂಬ ಮಾತನ್ನು 'ಅತ್ಯುತ್ತಮ ಸಣ್ಣ ಕಥೆಗಳು' ಸಂಕಲನದ ಆಧಾರದಿಂದ ನಿರೂಪಿಸಿ.

7. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಪ್ರಣಯದ ವಿವಿಧ ಮುಖಗಳು ಹೇಗೆ ವರ್ಣಿತವಾಗಿವೆ ? ವಿವರಿಸಿ.

ಅಥವಾ

ಕಾರಂತರ ಚೋಮನದುಡಿ ಕಾದಂಬರಿಯಲ್ಲಿ ದಲಿತ ಜನಾಂಗದ ಬದುಕಿನ ಚಿತ್ರಣ ಹೇಗೆ ಮೂಡಿಬಂದಿದೆ ? ವಿಶದಪಡಿಸಿ.

8. ಗುರುತತ್ತ್ವ, ಕರ್ಮತತ್ತ್ವ ಹಾಗೂ ಯಜ್ಞತತ್ತ್ವಗಳು ಬೆರಳ್ಗೆ ಕೊರಳ್ ನಾಟಕದಲ್ಲಿ ಹೇಗೆ ಪ್ರತಿಪಾದಿತವಾಗಿವೆ ? ವಿವೇಚಿಸಿ.

ಅಥವಾ

ಹೊಸಗನ್ನಡ ಪ್ರಬಂಧ ಸಂಕಲನದ ಪ್ರಬಂಧಗಳಲ್ಲಿ ಜೀವನದ ನಾನಾ ಮುಖಗಳನ್ನೂ, ಲೇಖಕರ ವಿವಿಧ ಮನೋಭಾವ ಹಾಗೂ ಬುದ್ಧಿ ತೀಕ್ಷ್ಣತೆಗಳನ್ನೂ ಹೇಗೆ ತಿಳಿಯಬಹುದೆಂದು ವಿವರಿಸಿ.

9. ಕೌಟುಂಬಿಕ ಬಾಳಿನ ಚಿತ್ರಣವು ಗರತಿಯ ಹಾಡು ಸಂಕಲನದ ತ್ರಿಪದಿಗಳಲ್ಲಿ ಹೇಗೆ ನಿರೂಪಿತವಾಗಿದೆ ? ವಿವೇಚಿಸಿ.

ಅಥವಾ

ಗಾದೆಗಳ ಸ್ವರೂಪ, ಲಕ್ಷಣಗಳನ್ನು ತಿಳಿಸಿ, ಗಾದೆಗಳಲ್ಲಿ ನಿರೂಪಿತವಾಗುವ ಮುಖ್ಯ ವಿಚಾರಗಳಾವುವೆಂಬುದನ್ನು ವಿಶದಪಡಿಸಿ.